SRI C. S. HULKOTI.—May I know the total amount spent up to March 1965 ?

† SRI M. V. KRISHNAPPA.—The total amount is not immediately available. I can furnish the amount spent for relief work.

SRI C. S. HULKOTI.—Out of Rs. 10,55,000 spent for scarcity works in Dharwar district, what is the total amount that was spent for rural areas communications and roads ?

SRI M. V. KRISHNAPPA.—In these areas it is mostly spent for rural communications. The other items come under minor irrigation.

Relief works taken in Channarayaptna Taluk.

**Q.*—552. SRI S. SIVAPPA (Shravanabelagola).—

Will the Minister for Revenue be pleased to state :—

(*a*) the rainfall in Channarayapatna taluk during the year 1965–66 and how far it compares itself with the average ;

(*b*) the average of crop yield to foodgrains per acre during 1965-66 in the said taluk ;

(*c*) the measures taken to alleviate the distress in the taluk ?

A.— SRI M. V. KRISHNAPPA (Minister for Revenue).—

(*a*) From 1st April 1965 to 20th March 1966 rainfall was 325.7 m. m. which is about 40 per cent of the average rainfall, during this year.

(*b*) *Paddy* (1) 10 to 12 pallas per acre of land fed by channels.

(2) 2 to 3 pallas per acre of land irrigated by tanks.

Ragi 1 to 3 pallas per acre.

(*c*) (1) 31 relief works at an estimated cost of Rs. 79,200 have been taken up by the Revenue and Public Works Department agencies. Other works have also been taken up by P. W. D. and N. E. S. Block to provide labour in the affected area.

(2) Instructions have been issued for sinking of pit well in tank bed where difficulty for water is experienced.

(3) Suspension and remission of Land Revenue are under the consideration of Deputy Commissioner.

(4) Arrangements have been made for supply of fodder for the cattle.

SRI S. SIVAPPA.—In Channarayapatna taluk, up to March 1966, only 40 per cent of the usual rainfall has been recorded. It is less than fifty per cent. May I know how Government came to conclusion when there was no water in the tanks that 2 to 3 pallas of paddy has been grown under these tanks ?

†Indicates that the remarks or speeches have not been revised by the member concerned.

† M. V. KRISHNAPPA.—The average yield per acre is 10 to 12 pallas and due to scarcity of water, the Hon'ble Member khows all crops had been dried up. In certain ares where there was some water, they could get some crops. In Channarayapatna some portions of it are irrigated by channels also. That is also taken into consideration while replying this question.

Sri S. SIVAPPA.—Has it come to the notice of the Government that excepting in channel area, in all other areas commanded by tanks, because there was no water in the tanks, the crops have dried up cent per cent ?

Sri M. V. KRISHNAPPA.—In most of the areas—because I was interested in Sravanabelagola—We had decided to have the Maha Mastakabhisheka last year, and we were anxious about water. Because we could not get enough water, we had to cancel the Maha Mastakabhisheka and have it this year. In that connection, I was going to Sravanabelagola a number of times. At least half-a-dozen times I have gone there and each time, the Hon'ble Member also used to be with me. It is a fact that tanks have dried up but in some areas they could get some crops because they had a little water.

Sri K. LAKKAPPA.—It is stated in the answer : that suspension and remission of land revenue are under the consideration of Deputy Commissioner I want to know whether this taluk has been declared as famine area, before the Government could say that the Deputy Commissioner will consider the question of remission ?

Sri M. V. KRISHNAPPA.—We do not declare any area as famine area. That is a very old system when the Indian famine code was in existence. Now we do not declare any area as famine area. We have liberal schemes under which we give them as much money as they require. If we simply apply the famine code, they will only get some gruel centres and feeding centres. That is all.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಪ್ರಶ್ನೆ (ಸಿ) ಗೆ ಕೊಟ್ಟಿರುವ ಉತ್ತರದಲ್ಲಿ ರೈತರಿಗೆ ಪರಿಹಾರ ಕೊಡತಕ್ಕ ನಾಲ್ಕು ಬಾಬುಗಳನ್ನು ಹೇಳಿದೆ. ರೈತರು ವಿವಿಧ ಇಲಾಖೆಗಳಿಂದ ಪಡೆದಂಥ ಸಾಲವನ್ನು ಬಲವಂತವಾಗಿ ವಸೂಲ್ಮಾಡುವುದನ್ನು ಕೈ ಬಿಡಬೇಕೆಂದು ಏನಾದರೂ ಆದೇಶ ನೀಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾವ ಪ್ರದೇಶವು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಿದೆಯೋ ಅಂಥ ಪ್ರದೇಶದಲ್ಲಿ ನಮ್ಮ ರೆವೆನ್ಯೂ ಇಲಾಖೆಯಿಂದ ಕೊಟ್ಟಿರತಕ್ಕ ಸಾಲವನ್ನು ವಸೂಲ್ಮಾಡಬೇಡಿ ಎಂದು ಆಟೋಮ್ಯಾಟಿಕ್ ಆಗಿ ತಿಳಿಸುತ್ತೇವೆ. ಆದರೆ ರೈತರು ಅನೇಕ ರೀತಿಯಿಂದ ಸಾಲ ಪಡೆದಿರುತ್ತಾರೆ. ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಮಾರ್ಗೇಜ್ ಬ್ಯಾಂಕ್ ಕೊಟ್ಟಿರತಕ್ಕ ಸಾಲದ ವಿಚಾರದಲ್ಲಿ ಅವರು ರಿಜರ್ವ್‌ಬ್ಯಾಂಕ್ ಇನ್‌ಸ್ಟ್ರಕ್ಷನ್ಸ್ ಪ್ರಕಾರ ನಡೆಯುತ್ತಾರೆ. ಇದರಲ್ಲಿ ನಮ್ಮ ಕಂಟ್ರೋಲ್ ಇಲ್ಲ. ಅಂಥ ಸಾಲದ ವಿಚಾರದಲ್ಲಿ ವಸೂಲ್ಮಾಡುವುದು ನಡೆಯುತ್ತಿದೆ. ಆದರೆ ರೆವೆನ್ಯೂ ಇಲಾಖೆ ಮಾತ್ರ ತನ್ನ ಸಾಲದ ಹಣವನ್ನು ವಸೂಲ್ಮಾಡುವುದಿಲ್ಲ.

Sri S. SIVAPPA.—In view of the fact that as explained by the Hon'ble Minister that acute scarcity was prevailing in this area, instead of suspension of land revenue, will the Government consider the question of remission of land revenue in Channarayapatna taluk ?

Sri M. V. KRISHNAPPA.—It is not an isolated case of Channarayapatna alone we are dealing with. Nearly half of the State has

been affected and this year land revenue has been suspended. It is a very big amount. Suspension does not mean anything if it is not remitted. Farmers will not be very much benefited, and it is difficult for the Government to collect it also. Government is therefore considering how to deal with the situation and much depends upon the monsoon this year. There are good signs already and it has started. We will consider how much of it may be collected and how much may be remitted.

Sri C. J. MUCKANNAPPA.—It is stated in the answer: 31 relief works are estimated at a cost of Rs. 79,200; may I know the labour that was employed and the works that were started and how long they lasted?

Sri M. V. KRISHNAPPA.—The works are being taken up. Suddenly if there is some rainfall, the farmers do not turn up for work, because they go for agriculture. Whenever there is scarcity, people turn up for work. The exact number of labour employed in that taluk, I do not have figures. But enough works are being taken up and in addition to these 31 works, we are spending nearly 12 lakhs in Sravanabelagola for building a permanent township there. This has employed more than 500–600 people in and around Sravanabelagola, including people from the place from which the Hon'ble Leader of the Opposition hails. We are spending 15 lakhs for the construction of a township in hat place.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾಲ್ಕಾಣೆ ಬೆಳೆಗಿಂತ ಕಡಮೆ ಬೆಳೆ ಆಗಿರತಕ್ಕ ಎಲ್ಲ ಪ್ರದೇಶಗಳಲ್ಲಿಯೂ ಕೂಡ ಭೂಕಂದಾಯವನ್ನು ಸಾಮೂಹಿಕವಾಗಿ ವಜಾ ಮಾಡತಕ್ಕದ್ದು ಸರ್ಕಾರದ ನೀತಿಯಲ್ಲವೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಉತ್ತರ ಕರ್ಣಾಟಕದಲ್ಲಿ ಅಣೆವಾರಿ ಪದ್ಧತಿ ಇರುವುದರಿಂದ ಅಲ್ಲಿ ನಾಲ್ಕಾಣೆಗಿಂತ ಕಡಮೆ ಬೆಳೆ ಎರಡು ಮೂರು ವರ್ಷವಾದರೆ ಅವರಿಗೆ ಪೂರ್ತಿ ರಿಮಿಷನ್ ಮಾಡುತ್ತೇವೆ. ಈ ಏಕರೂಪವಾದ ಕಾನೂನು ಜಾರಿಗೆ ಬಂದಿರುವುದರಿಂದ ಅದೇ ಪದ್ಧತಿಯನ್ನು ಹಳೇ ಮೈಸೂರು ಭಾಗಕ್ಕೂ ಅನ್ವಯಿಸಬೇಕಾಗುತ್ತದೆ. ಆ ವಿಚಾರವನ್ನು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಬಿ. ಬೈರಪ್ಪಾಜಿ.—ಸುಮಾರು ಒಂದೂವರೆ ಲಕ್ಷ ಪ್ರಜಾಸಂಖ್ಯೆ ಇರತಕ್ಕ ಈ ತಾಲ್ಲೂಕಿನಲ್ಲಿ 31 ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಸುಮಾರು ಒಂದು ರೂಪಾಯಿನಂತೆ ಒಬ್ಬರಿಗೆ ಒಂದು ದಿವಸಕ್ಕೆ ಕೊಡಬೇಕಾದರೂ, ಆ ತಾಲ್ಲೂಕಿನಲ್ಲಿರುವ ಅರ್ಧ ಜನ ನಿರ್ಗತಿಕರಾಗಿದ್ದಾರೆಂದು ತೆಗೆದುಕೊಂಡರೆ ಒಂದು ದಿವಸಕ್ಕೆ 75 ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆ ರೀತಿ ಒಂದು ದಿವಸಕ್ಕೆ 75 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗಿದೆಯೇ ? ಸಾಧ್ಯವಾಗದೆ ಇದ್ದರೆ ಇನ್ನು ಮುಂದಾದರೂ ಆ ರೀತಿ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? (ಸಿ) ಭಾಗಕ್ಕೆ ಉತ್ತರವಾಗಿ ದನಗಳಿಗೆ ಒಣ ಮೇವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಆ ರೀತಿ ಒಣ ಹುಲ್ಲನ್ನು ಕೊಡುವ ವ್ಯವಸ್ಥೆಯನ್ನು ಮಾಡಿಲ್ಲ, ದನಕರುಗಳು ಸತ್ತುಹೋಗಿವೆ ಮತ್ತು ಇದ್ದ ದನಗಳು ಎರಡು ಮೂರು ರೂಪಾಯಿಗಳಿಗೆ ಕಟುಕರ ಪಾಲಾಗಿವೆ. ಆದ್ದರಿಂದ ಆ ಜನಗಳಿಗೆ ಎತ್ತುಗಳನ್ನು ಕೊಂಡುಕೊಳ್ಳಲು ತಕಾವಿ ಸಾಲವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈಗ ಪರಿಹಾರ ಕಾಮಗಾರಿಗಳೆಂದರೆ ರಿಲೀಫ್ ವರ್ಕ್ಸ್ ಹಣದಿಂದ ಕೊಡುತ್ತೇವೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಈಗ ನಾವು ಕೊಟ್ಟಿರುವ ಮೂರು ಕೋಟಿ ರೂಪಾಯಿಗಳಲ್ಲಿ ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಈ ಎರಡೂವರೆ ಕೋಟಿ ರೂಪಾಯಿಗಳಲ್ಲಿ ರಿಲೀಫ್ ವರ್ಕ್ಸ್ ಎಂದು, 64 ಫ್ಯಾಮಿನ್ ಬಾಬಿನಿಂದ ಕೊಟ್ಟಿರುವುದು ಒಂದು ಕೋಟಿ ರೂಪಾಯಿ ಮಾತ್ರ. ಇನ್ನು ಒಂದೂವರೆ ಕೋಟಿ ರೂಪಾಯಿ ಬಾವಿಗಳಿಗಾಗಿ ಭೂ ಅಭಿವೃದ್ಧಿ ಬ್ಯಾಂಕಿಗೆ ಕೊಟ್ಟಿದ್ದೇವೆ. ಅದನ್ನು ಅವರು ಅದರ ನಾಲ್ಕರಷ್ಟು ಮಾಡಿಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲಿಯೂ 50-100 ಬಾವಿಗಳಿಗೆ ಕೊಡುತ್ತಾರೆ. ಒಂದೊಂದು ಬಾವಿಯ ಹತ್ತಿರ 40-50 ಜನರಿಗೆ ಕೆಲಸ ಸಿಕ್ಕುತ್ತದೆ. ರಿಲೀಫ್ ವರ್ಕ್ಸ್ ಮುಖಾಂತರವಾಗಿಯೇ ಎಲ್ಲ ಕೆಲಸಗಳನ್ನೂ ಮಾಡುತ್ತಿಲ್ಲ. ಬೇರೆ ಬೇರೆ ಮಾರ್ಗಗಳಿಂದ ಕೆಲಸಗಳನ್ನು ಮಾಡುತ್ತಿರುವುದರಿಂದ ಅನೇಕ ವಿಧದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಜನಗಳಿಗೆ ಕೆಲಸ ಸಿಕ್ಕುತ್ತದೆ. ಇದಲ್ಲದೆ ತಕಾವಿ ಸಾಲಗಳನ್ನು 50-60 ಲಕ್ಷ ರೂಪಾಯಿಗಳಷ್ಟು ಕೊಟ್ಟಿದ್ದೇವೆ. ಮಧ್ಯಮ ವರ್ಷದ ಜನರಿಗೆ ಈ ಸಾಲಗಳನ್ನು ಕೊಟ್ಟಿರುವುದರಿಂದ ಅವರು ಬಾವಿ ತೆಗೆಸಲು ಇದರ ಜೊತೆಗೆ ನಮ್ಮಲ್ಲಿರುವ ಹಣವನ್ನೂ ಉಪಯೋಗಿಸುವುದರಿಂದ ಇದರ ಎರಡರಷ್ಟು ಹಣ ಖರ್ಚಾಗಿ ಅಷ್ಟುಮಟ್ಟಿಗೆ ಕೆಲಸ ಜನರಿಗೆ ಸಿಕ್ಕಿದ ಹಾಗೆ ಆಯಿತು. ಮುಂದೆ ಕ್ಷಾಮ ಬಂದರೆ ಅದಕ್ಕಾಗಿ ಈಗಲೇ ಒಂದು ಇನ್ಷ್ಯೂರೆನ್ಸ್ ಮಾಡಿದ ಹಾಗೆ ಆಗುತ್ತದೆ. ಇದಲ್ಲದೆ ಮೈನರ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಕಾಂಟೂರ್ ಬಂಡಿಂಗ್ ಕೆಲಸಕ್ಕೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೀಗೆ ಪರಿಹಾರ ಕಾರ್ಯಗಳಿಗಾಗಿ ಬೇರೆ ಬೇರೆ ರೂಪದಲ್ಲಿ ಖರ್ಚು ಮಾಡುತ್ತಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—'ಸ್ಕೇರ್ಸಿಟಿ ಏರಿಯಾಸ್' ಎಂದು ಸರ್ಕಾರದವರು ಘೋಷಣೆ ಮಾಡಿರುವ ಬಗ್ಗೆ ಒಂದೆರಡು ಪ್ರಶ್ನೆಗಳು ಬಂದಿವೆ. ಮಳೆ ಬೆಳೆ ಸುತರಾಂ ಇಲ್ಲದೆ ಇರುವ ಪೂರ್ತಿ ಪ್ರದೇಶವಿದ್ದರೂ ಕೂಡ ಸರ್ಕಾರದವರು ಕೆಲವು ಗ್ರಾಮಗಳನ್ನು ಮಾತ್ರ ಡಿಕ್ಲೇರ್ ಮಾಡಿರುತ್ತಾರೆ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ, ಹೇಗೆ ಮಾಡಿದ್ದಾರೆ? ಮಳೆ ಬೆಳೆ ಇಲ್ಲದೆ ಇರುವ ತಾಲ್ಲೂಕುಗಳಲ್ಲಿ ಪೂರ್ತಿಯಾಗಿ ರಿಮಿಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ಈ ವಿಚಾರ ಆಗಾಗ ಪತ್ರಿಕೆಗಳಲ್ಲಿ ಬಂದು ಕೆಲವರಿಗೆ ತಪ್ಪು ಭಾವನೆಯನ್ನುಂಟು ಮಾಡಿದೆ. ಕಾಂಟೂರ್ ಬಂಡಿಂಗ್, ಸಾಯಿಲ್ ಕನ್ಸರ್ವೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ, ಹಳ್ಳಿಯವರು ಒಪ್ಪಲಿ, ಒಪ್ಪದೆ ಇರಲಿ ಆ ಕೆಲಸಗಳನ್ನು ಮಾಡಬೇಕಾಗುತ್ತದೆ. ಸಾಯಿಲ್ ಕನ್ಸರ್ವೇಷನ್ ಆಕ್ಟ್ ಪ್ರಕಾರ ಕೆಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಅದರಂತೆ ಆ ಪ್ರದೇಶಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಡಿಕ್ಲೇರ್ ಮಾಡಬೇಕಾಗುತ್ತದೆ. ಉದಾಹರಣೆಗೆ ನಾಗಮಂಗಲ ತಾಲ್ಲೂಕಿನಲ್ಲಿ ಒಂದು ಗ್ರಾಮದಲ್ಲಿ ಕಾಂಟೂರ ಬಂಡಿಂಗ್ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಆ ಗ್ರಾಮಗಳನ್ನು ಮಾತ್ರ ಸ್ಕೇರ್ಸಿಟಿ ಏರಿಯಾಸ್ ಎಂದು ಆ ಕಾನೂನಿನ ಸಂಬಂಧದಲ್ಲಿ ಡಿಕ್ಲೇರ್ ಮಾಡಬೇಕಾಗುತ್ತದೆ. ಹೀಗೆ ಒಂದೆರಡು ಗ್ರಾಮಗಳನ್ನು ಡಿಕ್ಲೇರ್ ಮಾಡುವುದರಿಂದ ಜನರಿಗೆ ಭಯ ಭ್ರಾಂತಿ ಹುಟ್ಟುತ್ತದೆ. ಕಾನೂನು ಪ್ರಕಾರ ಆ ರೀತಿ ಡಿಕ್ಲೇರ್ ಮಾಡಬೇಕಾಗಿರುವುದರಿಂದ ಅದು ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕಾಗುತ್ತದೆ. ಆಗ ರೈತರಿಗೆ ಬೇಕಾಗಿರಲಿ, ಬೇಡವಾಗಿರಲಿ, ಅವರು ಕಾಂಟೂರ್ ಬಂಡ್ ಹಾಕುವುದಕ್ಕೆ ಒಪ್ಪಲಿ, ಒಪ್ಪದೆ ಇರಲಿ ಕಾಂಟೂರ್ ಬಂಡಿಂಗ್ ಕೆಲಸವನ್ನು ಪ್ರಾರಂಭ ಮಾಡುತ್ತೇವೆ, ಇದಕ್ಕಾಗಿ ಕೆಲವು ಗ್ರಾಮಗಳನ್ನು ಮಾತ್ರ ಡಿಕ್ಲೇರ್ ಮಾಡಬೇಕಾದ ಪರಿಸ್ಥಿತಿ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—79,200 ರೂಪಾಯಿಗಳ ಕೆಲಸಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಈ ಕೆಲಸವನ್ನು ಮಾಡುವವರು ರೆವಿನ್ಯೂ ಇಲಾಖೆಯವರೇ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆಯವರೇ ಸ್ವಾಮಿ? ಹಾಸನ ಜಿಲ್ಲೆಯಲ್ಲಿ ಯಾವ ಏಜೆನ್ಸಿ ಮುಖಾಂತರ ಕೆಲಸ ಮಾಡುವುದಕ್ಕೆ ಸರ್ಕಾರ ಆದೇಶವನ್ನು ಕೊಟ್ಟಿದೆ ಸ್ವಾಮಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಸನದಲ್ಲಿ 64 ಫ್ಯಾಮಿನ್ ಬಾಬಿನಲ್ಲಿ ನಡೆಯುವ ಕೆಲಸಗಳು ರೆವಿನ್ಯೂ ಇಲಾಖೆಯ ಮುಖಾಂತರ ನಡೆಯುತ್ತಿವೆ. ತಕಾವಿ ಸಾಲಗಳನ್ನು ಡೆವಲಪ್‌ಮೆಂಟ್ ಕಮಿಟಿಗಳ ಮುಖಾಂತರ ಕೊಡುತ್ತಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ಕೆಲಸವನ್ನು ವ್ಯವಸಾಯ ಇಲಾಖೆಯವರು ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—31 ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು ಅದಕ್ಕೆ 79,2 ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದಾರೆ. ಒಂದು ದಿವಸಕ್ಕೆ

ಎಷ್ಟು ಜನ ಕೂಲಿಗಳು ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ? ಒಣ ಹುಲ್ಲನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಎಷ್ಟು ಲೋಡ್ ಹುಲ್ಲನ್ನು ಒದಗಿಸಿದ್ದಾರೆ, ಎಷ್ಟು ದನಕರುಗಳಿಗೆ ಆ ಮೇವನ್ನು ಒದಗಿಸಲಾಗಿವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಈ ಬೆಳಿಗ್ಗೆ ಹಾಸನದ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿದ್ದೆ. ಈಗ ಮೂರು ನಾಲ್ಕು ದಿನಗಳಿಂದ ಒಬ್ಬರೂ ಕೆಲಸಕ್ಕೆ ಬರುತ್ತಿಲ್ಲ ಎಂದು ಹೇಳಿದರು. ಮಳೆ ಬಂದಾಗ ಯಾರೂ ಕೆಲಸಕ್ಕೆ ಬರುವುದಿಲ್ಲ. ಆ ಕಾಲದಲ್ಲಿ ವ್ಯವಸಾಯಗಾರನು ತನ್ನ ಕೆಲಸಗಳನ್ನು ನೋಡಿಕೊಳ್ಳುತ್ತಾನೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಬಾಗೂರು ಮತ್ತು ಹಿರಿಸಾವೆ ಹೋಬಳಿಗಳಲ್ಲಿ ಮೊನ್ನೆ ದಿವಸ ಚೆನ್ನಾಗಿ ಮಳೆಯಾಗಿದೆ, ನಿನ್ನೆಯ ದಿನ ಶ್ರವಣಬೆಳಗೊಳದಲ್ಲಿ ಕೂಡ ಚೆನ್ನಾಗಿ ಮಳೆಯಾಗಿದೆ ಎಂದು ಮಾನ್ಯ ಶಿವಪ್ಪನವರಿಗೆ ಹೇಳಿ ಎಂದು ತಿಳಿಸಿದ್ದಾರೆ.

Sri S. SIVAPPA.—The question relates to the period from 1st April 1965 to 20th March 1966. May I know the relief works taken in Channarayapatna and other taluks of Hassan District—the relief works taken up were exhausted by the end of January, out of the funds given by the Revenue Department and other departments by 30th January. And though thousands of people offered themselves for service for wages, no work was made available for the last six months.

ಶ್ರೀ ಎಂ. ವಿ. ಕೃಷ್ಣಪ್ಪ.—ಜನವರಿ ತಿಂಗಳ ಕೊನೆಗೆ ಹಣ ಖರ್ಚಾಗಿ ಹೋದದ್ದು ನಿಜ. ಆದರೆ ಮಾರ್ಚಿ ತಿಂಗಳಿನಲ್ಲಿ ಜಿಲ್ಲೆಯ ಎಲ್ಲ ಪ್ರತಿನಿಧಿಗಳನ್ನೂ ಹಾಸನದಲ್ಲಿ ಸೇರಿಸಿ, ಮುಂದೆ ಏನು ಮಾಡಬೇಕೆಂದು ಯೋಚನೆ ಮಾಡಿ 5 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಅದರಲ್ಲಿ ಮೂರು ಲಕ್ಷ ಖರ್ಚಾಗಿ ಎರಡು ಲಕ್ಷ ರೂಪಾಯಿಗಳು ಉಳಿದಿವೆ, ಅದನ್ನೂ ಖರ್ಚು ಮಾಡುತ್ತೇನೆ, ಅದು ಸಾಲದೆ ಬಂದರೆ ಇನ್ನೂ ಬೇಕು ಎಂದು ಕೇಳುತ್ತೇನೆ, ಆ ಹಣವನ್ನು ಕೊಡಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—64 ಫ್ಯಾಮಿನ್‌ನಲ್ಲಿ ಮೈನರ್ ಇರಿಗೇಷನ್‌ಗಾಗಿ ಖರ್ಚು ಮಾಡುವ ಹಣವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೊಟ್ಟು ಕೆಲಸ ಮಾಡುವುದರಿಂದ ಕೆಲಸ ಚೆನ್ನಾಗಿ ಆಗುತ್ತದೆ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿದೆಯೋ ಸ್ವಾಮಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಕೊಟ್ಟರೆ ಸ್ವಲ್ಪ ಟ್ಯಾಂಜಿಬಲ್ ವರ್ಕ್ಸ್ ಆಗುತ್ತವೆ. ರಿಲೀಫ್ ಕೆಲಸದಲ್ಲಿ ರಸ್ತೆಗಳಿಗೆ ಖರ್ಚು ಮಾಡಿದರೆ ಹಳೆ ರಸ್ತೆಗಳನ್ನು ಕೆಡಿಸಿ ಹೊಸ ರಸ್ತೆಗಳನ್ನು ಮೇಂಟೇನ್ ಮಾಡುವವರಿಲ್ಲದೆ ತೊಂದರೆಯುಂಟಾಗುತ್ತದೆ. ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಹಣವನ್ನು ಕೊಟ್ಟರೆ ಬಹಳ ಮಟ್ಟಿಗೆ ರಿಲೀಫ್ ವರ್ಕ್ಸ್ ಹೆಸರಿನಲ್ಲಿ ಮೈನರ್ ಇರಿಗೇಷನ್ ಕೆಲಸಗಳಾಗುತ್ತವೆ ಎಂದು ಅವರಿಗೆ ವಹಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪರಿಹಾರ ಕಾರ್ಯಗಳಿಗಾಗಿ ಹಣವನ್ನು ಕೊಟ್ಟಿರುವುದರಲ್ಲಿ ಖರ್ಚು ಮಾಡುವಾಗ ವಿರೋಧ ಪಕ್ಷದ ಶಾಸಕರು ಇರತಕ್ಕ ಕ್ಷೇತ್ರಗಳಲ್ಲಿ 'ಗೋ ಸ್ಲೋ' ನೀತಿಯನ್ನು ಅನುಸರಿಸಿ ಎಂದು ಜಿಲ್ಲಾಧಿಕಾರಿಗಳಿಗೆ ಗುಪ್ತವಾಗಿ ಪತ್ರಗಳನ್ನು ಬರೆದು ಸರ್ಕಾರ ಸಂದೇಶಗಳನ್ನು ಕೊಟ್ಟಿರುವುದು ನಿಜವೇ ಸ್ವಾಮಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದು ಸತ್ಯಕ್ಕೆ ಬಹಳ ದೂರವಾದುದು. ದೇಶದಲ್ಲಿರುವವರೆಲ್ಲ ನಮ್ಮ ಪ್ರಜೆಗಳೇ. ನಾವು ಹಣವನ್ನು ಡಿವಿಜನಲ್ ಕಮಿಷನರುಗಳಿಗೆ ಕೊಡುತ್ತೇವೆ. ಅವರು ಜಿಲ್ಲಾಧಿಕಾರಿಗಳಿಗೆ ಹಂಚುತ್ತಾರೆ. ಸರ್ಕಾರದವರು ನೇರವಾಗಿ ಜಿಲ್ಲಾಧಿಕಾರಿಗಳ ಕೂಡ ಸಂಪರ್ಕವನ್ನು ಇಟ್ಟುಕೊಂಡಿಲ್ಲ. ಜಿಲ್ಲಾಧಿಕಾರಿಗಳು ಪ್ರವಾಸ ಮಾಡಿ ಯಾವ ಯಾವ ಭಾಗಕ್ಕೆ ಅವಶ್ಯಕತೆ ಇದೆ ಎಂದು ನೋಡಿಕೊಂಡು ಆ ಪ್ರದೇಶಗಳಿಗೆ ಹಣವನ್ನು ಕೊಡುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಚನ್ನರಾಯಪಟ್ಟಣದಲ್ಲಿ ಎಷ್ಟು ನೆಲ ಬಾವಿಗಳನ್ನು ತೋಡಲಾಗಿದೆ? ಅದರಿಂದ ಜನರಿಗೆ ಪ್ರತಿಫಲ ದೊರೆತಿದೆಯೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೆ ಆ ಕೆಲಸವಾಗಿ ಜನತೆಗೆ ಅದರ ಪ್ರತಿಫಲ ದೊರೆಯುತ್ತಿದೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯಲ್ಲಿ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಅಭಾವ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಕೊಳ್ಳಬೇಕೆಂದು ಕೇಳಿದರೆ ಸರಕಾರವನ್ನು ಕೇಳ ಬೇಕೆಂದು ಹೇಳುತ್ತಾರೆ. ಅವರಿಗೆ ಸರಕಾರ ಏನಾದರೂ ರಹಸ್ಯವಾಗಿ ತಿಳಿವಳಿಕೆ ನೀಡಿದೆಯೇ ?

Mr. SPEAKER.—It must be a proper supplementary and supplementary relating to the Question ; Does it relate to Channarayapatna ?

Sri C. J. MUCKANNAPPA.—Sir, this supplementary arises out of the answer given by the hon. Minister that this is "shuddha sullu"

Mr. SPEAKER.—The hon. Member has made it sufficiently clear. Next question.

Remission of Land Revenue

*Q.—576. Sri S. RAJAGOPAL (K. G. F.).—

Will the Minister for Revenue be pleased to state :—

(*a*) whether Government have given any remission of land revenue on dry and wet lands for the year 1965-66 in Kolar district due to failure of crops ;

(*b*) if so, the talukwise details may be furnished ?

A.—Sri M. V. KRISHNAPPA (Minister for Revenue).—

(*a*) Remission proposals have been called for from the Tahsildars.

(*b*) Does not arise.

Sri S. RAJAGOPAL.—May I know whether the Government has got the report from the Tahsildar at least by this time ?

† Sri M. V. KRISHNAPPA.—We are expecting them.

Appointment of Public Prosecutors and Government Pleaders

*Q.—610. Sri K. S. SURYANARAYANA RAO (Mysore City).—

Will the Chief Minister be pleased to state :—

(*a*) what are all the qualifications fixed for appointment of Public Prosecutors and Government Pleaders ;

(*b*) how many persons had applied for the said post in Gulbarga District ;

(*c*) what is the recommendation of the District Judge, Gulbarga ?